O.S.No.:253/2020
P.W.:1

ಈ ದಿನ ದಿ:18.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್.ವಿ.ವಿ ರವರಿಂದ:-

6. ಸದರಿ ವಿಭಾಗ ಪತ್ರದ ಆಧಾರ ಮೇಲೆ ಹೊಸಹಳ್ಳಿ ಗ್ರಾಮದ ಸರ್ವೆ ನಂ.13/3ರಲ್ಲಿ 1ಎಕರೆ 35 ಗುಂಟೆ ಜಮೀನಿನ ಮತ್ತು ದೇವರಹಳ್ಳಿ ಗ್ರಾಮದ ಸರ್ವೆ ನಂ.17ರಲ್ಲಿ 1ಎಕರೆ 35 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖಾತೆಗಳು 6ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯು ಹೊಸಹಳ್ಳಿ ಗ್ರಾಮದ ಸರ್ವೆ ನಂ.13/3ರಲ್ಲಿರುವ 1ಎಕರೆ 35 ಗುಂಟೆ ಸಂಪೂರ್ಣ ಜಮೀನನ್ನು ಯಮುನಾ ಬಾಯಿ ರವರಿಗೆ ದಿನಾಂಕ.04.07.2005ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕುಟುಂಬದ ಹಣದ ಅವಶ್ಯಕತೆಗಳಿಗಾಗಿ ಮತ್ತು ಪೂರ್ವಿಕರು ಮಾಡಿದ ಸಾಲದ ತಿರುವಳಿಗಾಗಿ ಆ ಜಮೀನನ್ನು ಮಾರಾಟ ಮಾಡುತ್ತಿರುವುದಾಗಿ 6ನೇ ಪ್ರತಿವಾದಿಯು ಯಮುನಾಬಾಯಿ ರವರಿಗೆ ಬರೆದುಕೊಟ್ಟ ಖರೀದಿ ಪತ್ರದಲ್ಲಿ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಯಾವುದೇ ಸಾಲ ತೀರಿಸಿಲ್ಲ, ಸಾಲವನ್ನು ನಾನು ತೀರಿಸಿರುತ್ತೇನೆ ಎಂದು ನುಡಿಯುತ್ತಾರೆ. ಹೊಸಹಳ್ಳಿ ಗ್ರಾಮದ ಸರ್ವೆ ನಂ.13/3ರಲ್ಲಿ 1ಎಕರೆ 35 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಕ್ರಯದಂತೆ ಸದರಿ ಜಮೀನಿನಲ್ಲಿ ಯಮುನಬಾಯಿ ರವರು ಸ್ವಾಧೀನಾನುಭವದಲ್ಲಿದ್ದಾರೆ ಮತ್ತು ಖಾತೆಯು ಸಹ ಅವರ ಹೆಸರಿನಲ್ಲಿದೆ ಎಂದರೆ ಸರಿ.

7. ಕುಟುಂಬದ ಸಾಲವನ್ನು ತೀರಿಸಿ ದೇವರಹಳ್ಳಿ ಗ್ರಾಮದ ಸರ್ವೆ ನಂ.17ರಲ್ಲಿ 1ಎಕರೆ 35 ಗುಂಟೆ ಜಮೀನನ್ನು 6ನೇ ಪ್ರತಿವಾದಿ ತಮಗೆ ಉಳಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ 6ನೇ ಪ್ರತಿವಾದಿಯ ಹೆಸರಿಗೆ

ಆದ ಖಾತೆ ಪಹಣಿಗಳ ವಿರುದ್ದ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ. ನಮ್ಮ ಸಹೋದರಿಯರು ಸಹ ನಾವುಗಳು ಮಾಡಿಕೊಂಡಂತಹ ವಿಭಾಗ ಪತ್ರಕ್ಕೆ ಒಪ್ಪಿ ಗೆ ಸೂಚಿಸುವ ಸಲುವಾಗಿ ದಿನಾಂಕ.07.11.2020ರಂದು ನೋಂದಣಿ ಹಕ್ಕು ನಿವೃತ್ತಿ ಪತ್ರವನ್ನು ಸಹ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗಾಗಲೇ ನೋಂದಾಯಿತಿ ವಿಭಾಗಪತ್ರದಡಿಯಲ್ಲಿ ನನ್ನ ಹಿಸ್ಸೆಯ ಸ್ವತ್ತುಗಳನ್ನು ಪಡೆದುಕೊಂಡಿದ್ದರು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಹಿಸ್ಸೆ ಕೋರಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

8. ದಾವಾಸ್ವತ್ತಿನಲ್ಲಿ 6ನೇ ಪ್ರತಿವಾದಿಯೇ ಸ್ವಾಧೀನಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೇ ಅವರಿಗೆ ಬಿಟ್ಟು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನಲ್ಲಿ ನನಗೆ ಯಾವುದೇ ಹಿಸ್ಸೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ 6ನೇ ಪ್ರತಿವಾದಿ ಒಬ್ಬರೆ ಸ್ವಾಧೀನಾನುಭವದಲ್ಲಿದ್ದು, ಅದನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ 6ನೇ ಪ್ರತಿವಾದಿ ಒಬ್ಬರೆ ಹಕ್ಕುದಾರರು ಮತ್ತು ಮಾಲೀಕರು ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

O.S.No.:253/2020
P.W.:1